ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	1150 (1347)
ಸದಸ್ಯರ ಹೆಸರು	ಡಾ॥ ವೈ.ಎ.ನಾರಾಯಣಸ್ವಾಮಿ
ಉತ್ತರಿಸುವ ದಿನಾಂಕ:	18-03-2020
ಉತ್ತರಿಸುವವರು	ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

	ಪ್ರಶ್ನೆ	ಉತ್ತರ
ಅ	ರಾಜ್ಯದ ಮುಜರಾಯಿ ದೇವಾಲಯಗಳಲ್ಲಿ ಸಾಮೂಹಿಕ ವಿವಾಹಗಳನ್ನು ನಡೆಸಲು ಸರ್ಕಾರ ನಿರ್ಧರಿಸಿದೆಯೇ;	ಹೌದು.
ಆ	ಹಾಗಿದ್ದಲ್ಲಿ, ಇದರ ರೂಪುರೇಷಗಳನ್ನು ತಿಳಿಸುವುದು; ಅದನ್ನು ಪ್ರೋತ್ಸಾಹಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?	ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮೂಲಭೂತ ಸೌಕರ್ಯಗಳಿರುವ ದೇವಾಲಯಗಳನ್ನು ಸಾಮೂಹಿಕ ವಿವಾಹ ನಡೆಸಲು ಆಯ್ಕೆ ಮಾಡಲಾಗಿರುತ್ತದೆ. ಈ ಕುರಿತು ದಿನಾಂಕ:22.11.2019ರಂದು ಸುತ್ತೋಲೆ ಹೊರಡಿಸಲಾಗಿದ್ದು, ಸಂಬಂಧಪಟ್ಟವರಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. ಇದನ್ನು ಪ್ರೋತ್ಸಾಹಿಸಲು ಆಯಾಯಾ ದೇವಾಲಯದ ವತಿಯಿಂದ ವಧು ವರರಿಗೆ ಪ್ರೋತ್ಸಾಹ ಧನ ಪಾವತಿಸಲು ಉದ್ದೇಶಿಸಲಾಗಿದೆ. ವಿವರ ಕೆಳಕಂಡಂತಿದೆ.

ಕ್ರ.ಸಂ	ವಿವರ	ಮೊತ್ತ (ರೂ.ಗಳಲ್ಲಿ)
1	ವರನಿಗೆ ಪ್ರೋತ್ಸಾಹ ಧನ (ಹೂವಿನ ಹಾರ, ಪಂಚೆ, ಶರ್ಟ್ ಮತ್ತು ಶಲ್ಯಕ್ಕಾಗಿ)	5,000
2	ವಧುವಿಗೆ ಪೋತ್ಸಾಹ ಧನ (ಹೂವಿನಹಾರ, ಧಾರೆ ಸೀರೆ ಮತ್ತು ರವಿಕೆ ಕಣಕ್ಕಾಗಿ)	10,000
3	ವಧುವಿಗೆ ಚಿನ್ನದ ತಾಳಿ, ಎರಡು ಚಿನ್ನದ ಗುಂಡು (ಅಂದಾಜು 8 ಗ್ರಾಂ ತೂಕ)	40,000
	ಒಟ್ಟು	**55,000**

(ಸಂಖ್ಯೆ:ಕಂಇ 55 ಮುಸಪ್ರ 2020)

(ಕೋಟಾ ಶ್ರೀನಿವಾಸ ಪೂಜಾರಿ)
ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲ ಸಾರಿಗೆ ಸಚಿವರು.